# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 13/04/2022 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು<br>2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ<br>3. ಡಾ॥ ವೆಂಕಟೇಶ್, ಆರೋಗ್ಯ ವೈದ್ಯಾಧಿಕಾರಿಗಳು<br>4. ಕೆ.ಎಸ್.ರವಿಂದ್ರನಾಥ್ ಅರಣ್ಯಾಧಿಕಾರಿಗಳು<br>5. ಶ್ರೀಮತಿ.ಜ್ಯೋತಿ, ಸ.ಕಾ.ಅ (ಘನತ್ಯಾಜ್ಯ ನಿರ್ವಹಣೆ)<br>6. ಎಸ್.ಚೈತ್ರ ಹಿರಿಯ ಆರೋಗ್ಯ ಪರಿವೀಕ್ಷಕರು<br>7. ಶ್ರೀ.ವಿಜಯರಾಜ್ ಎಸ್, ವಾರ್ಡ್ ನಂ.49, ಕಿರಿಯ ಆರೋಗ್ಯ ಪರಿವೀಕ್ಷಕರು<br>8. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು<br>9. ಪೂಜಾ ಎಂ ಸಹಾಯಕ ಅಭಿಯಂತರರು<br>10. ಗುರುಪ್ರಸಾದ್ ಎಸ್.ಹೆಚ್, ಮಾರ್ಷಲ್<br>11. ಮೊಹಮದ್ ರಹಮತುಲ್ಲಾ, ಕೆಲಸ ಪರಿವೀಕ್ಷಕರು<br>12. ಆರ್.ಮೋಹನ್‌ರಾಜ್, ಸ್ಟ್ರೀಟ್‌ಲೈಟ್ ಮೇಂಟೆನೆಸ್ | 1. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ<br>2. ಪಿ.ಕಿರೀಟಪ್ಪ |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಕೆ.ಎಸ್.ಎಫ್.ಸಿ ಲೇಔಟ್‌ನಲ್ಲಿ ದೇವಸ್ಥಾನ /ಶಾಲೆಯ ಬಳಿಯ ಅಂಗಡಿಗಳಲ್ಲಿ ಕಾಫೀ, ಟೀ, ಸಿಗರೇಟ್ ಹಾಗೂ ಗಾಂಜಾ ಸೇವನೆ ನಡೆಯುತ್ತಿರುವ ಬಗ್ಗೆ ಕ್ರಮಕೈಗೊಳ್ಳಲು ಹಿಂದಿನ ಸಭೆಯಲ್ಲಿ ಸೂಚಿಸಿರುವ ಮೇರೆಗೆ ಬಿಬಿಎಂಪಿ ವತಿಯಿಂದ ಕಾಫಿ, ಟೀ, ಸಿಗರೇಟ್ ಅಂಗಡಿಗಳಿಗೆ ನೋಟೀಸ್ ಜಾರಿ ಮಾಡಲಾಗಿದ್ದರೂ ಕಂಟ್ರೋಲ್ ಆಗಿರುವುದಿಲ್ಲ ಕಾಫಿ, ಟೀ, ಸಿಗರೇಟ್ ಮಾರುವ ಅಂಗಡಿಗಳ ಲೈಸನ್ಸ್ ರದ್ದುಪಡಿಸಲು ಹಾಗೂ ಅಂತಹ ಅಂಗಡಿಗಳಿಗೆ ದಂಡ ವಿಧಿಸಲು ತಿಳಿಸಲಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇವಿಸಿದರೆ ದಂಡ ಹಾಕಲು ತಿಳಿಸಿದರು ಹಾಗೂ ಈ ಸಂಬಂಧ ಪೋಲೀಸ್ ಠಾಣೆಗೆ ಪತ್ರ ಬರೆಯಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಪು.ತಿ.ನೋ,

Scanned with CamScanner

ಪಾಟ್‌ಹೋಲ್ಸ್‌ಗಳ ಬದಿಯಲ್ಲಿರುವ ಶಿಲ್ಟ್‌ಗಳನ್ನು ತೆಗೆದು ಶುದ್ಧಿಗೊಳಿಸಲಾಗಿದೆ. ಒಂದು ವಾರದೊಳಗೆ ಡಾಂಬರೀಕರಣ ಕಾರ್ಯ ಪ್ರಾರಂಭಿಸಲಾಗುವುದು ಎಂದು ಸಹಾಯಕ ಅಭಿಯಂತರರು ತಿಳಿಸಿದರು. ಟ್ರಾಕ್ಟರ್ / ಗ್ಯಾಂಗ್‌ಮೆನ್‌ಗಳು ಇಲ್ಲ ಈ ಬಗ್ಗೆ ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

ಶ್ರೀನಿವಾಸ್, ಆರೋಗ್ಯ ಮೇಲ್ವಿಚಾರಕರು ಬಿಬಿಎಂಪಿ ನೌಕರರು ರವರು ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ ಈ ಬಗ್ಗೆ ಕ್ರಮ ಜರುಗಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಸೂಚಿಸಿದರು.

ರೈಲ್ವೇ ನಿಲ್ದಾಣದ ಹತ್ತಿರ ಕಸವನ್ನು ಸುರಿಯುತ್ತಿದ್ದಾರೆ ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಸಮಿತಿ ಸದಸ್ಯರು ತಿಳಿಸಿದರು.

ಈ ಬಗ್ಗೆ ಕೆ.ಎಸ್.ಎಫ್.ಸಿ ಅಸೋಸಿಯೇಷನ್ ವತಿಯಿಂದ ರೈಲ್ವೇ ಇಲಾಖೆಗೆ ಪತ್ರ ಬರೆದು ಕಾಂಪೌಂಡ್ ಗೋಡೆ ಹಾಕುವಂತೆ ಕೋರಲು ಸೂಚಿಸಲಾಯಿತು ಇದರಿಂದ ಕಸ ಹಾಕುವುದು ತಪ್ಪುತ್ತದೆ ಎಂದು ನೋಡಲ್ ಅಧಿಕಾರಿಗಳು ತಿಳಿಸಿದರು.

ಬೆಳಿಗ್ಗೆ ಸ್ಟ್ರೀಟ್ ಲೈಟ್‌ಗಳನ್ನು ನಿಯಂತ್ರಣ ಮಾಡಲು ಟೈಮರ್‌ಗಳನ್ನು ಹೊಸದಾಗಿ ಹಾಕಲು ತೀರ್ಮಾನಿಸಲಾಗಿದೆ ಎಲ್.ಇ.ಡಿ ಬಲ್ಬ್‌ಗಳನ್ನು ಬಿಬಿಎಂಪಿ ವತಿಯಿಂದ ಒದಗಿಸಲಾಗುತ್ತಿದ್ದು, ಬಲ್ಬ್‌ಗಳನ್ನು ಬದಲಾಯಿಸಲು ಕ್ರಮ ಜರುಗಿಸಲಾಗುವುದು ಎಂದು ಎಲೆಕ್ಟ್ರಿಕ್ ಕಾಂಟ್ರ್ಯಾಕ್ಟರ್ ರವರು ತಿಳಿಸಿದರು ಹಾಗೂ ಸ್ಟ್ರೀಟ್‌ಲೈಟ್ ಸಿಮೆಂಟ್ ಪೋಲ್‌ಗಳು ಹಳೆಯದಾಗಿದ್ದು, ಬದಲಿಸಲು ಸಹಾಯಕ ಅಭಿಯಂತರರು (ಬೆಸ್ಕಾಂ) ರವರಿಗೆ ಸೂಚಿಸಲಾಯಿತು.

ಡಾನ್ ಬಾಸ್ಕೋ ಚರ್ಚ್ ಪಕ್ಕದಲ್ಲಿನ ಮರದ ಕೊಂಬೆಗಳನ್ನು ತೆಗೆದುಹಾಕಬೇಕು ಎಂದು ಸಮಿತಿ ಸದಸ್ಯರು ತಿಳಿಸಿದ್ದು, ಈ ಬಗ್ಗೆ ಅರಣ್ಯ ಇಲಾಖೆ ರವರು ಸ್ಥಳಪರಿಶೀಲಿಸಿ ಕ್ರಮ ಜರುಗಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಸೊಳ್ಳೆ ನಿಯಂತ್ರಣಕ್ಕೆ ಔಷಧಿಗಳನ್ನು ಸಿಂಪಡಿಸಬೇಕು ಹಾಗೂ ಫಾಗಿಂಗ್ ಮಾಡಲು ಕ್ರಮಜರುಗಿಸುವಂತೆ ಹಿರಿಯ ಆರೋಗ್ಯ ನಿರೀಕ್ಷಕರಿಗೆ ಸೂಚಿಸಲಾಯಿತು.

ಕೋವಿಡ್-19:- ಡಾ॥ ವೆಂಕಟೇಶ್, ಆರೋಗ್ಯ ಅಧಿಕಾರಿಗಳು ಮಾತನಾಡುತ್ತಾ ಕೋವಿಡ್-19 ರ 4ನೇ ಅಲೆ ಬರುವ ಸಾಧ್ಯತೆ ಇದ್ದು, ಅಂತರ್‌ರಾಷ್ಟ್ರೀಯ ವಿಮಾನಗಳು ಪ್ರಾರಂಭವಾಗಿರುವುದರಿಂದ ಕೋವಿಡ್-19 ಹೆಚ್ಚಾಗುವ ಸಾಧ್ಯತೆ ಇದೆ, ಮಾಸ್ಕ್ ತೆಗೆಯಲು ಅನುಮತಿ ನೀಡಿಲ್ಲ. ಈ ಹಿಂದಿನಂತೆಯೇ ಮಾಸ್ಕ್ ಸ್ಯಾನಿಟೈಜರ್ ಉಪಯೋಗಿಸಬೇಕೆಂದು ತಿಳಿಸಿದರು.

ಪು.ತಿ.ನೋ,

Scanned with CamScanner

2ನೇ ಡೋಸ್ ಶೇ.100 ರಷ್ಟು ವ್ಯಾಕ್ಸಿನೇಷನ್ ಮಾಡಲಾಗಿದೆ. ಪ್ರವಾಸಿ ಸ್ಥಳಗಳಲ್ಲಿ ಎಚ್ಚರಿಕೆಯಿಂದಿರಲು ಬೂಸ್ಟರ್ ಡೋಸ್ ಹಾಕಿಸಿಕೊಳ್ಳಲು ತಿಳಿಸಲಾಯಿತು.

60 ವರ್ಷಕ್ಕೂ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಬೂಸ್ಟರ್ ಡೋಸ್ ನೀಡಲಾಗುತ್ತಿದೆ. 12–15 ವರ್ಷದ ಮಕ್ಕಳಿಗೆ ಶೇ.60 ರಷ್ಟು ವ್ಯಾಕ್ಸಿನೇಷನ್ ಮಾಡಲಾಗುತ್ತಿದೆ. 16–18 ವರ್ಷದವರಿಗೆ ಶೇ.92 ರಷ್ಟು ವ್ಯಾಕ್ಸಿನೇಷನ್ ಮಾಡಲಾಗಿದೆ. ಬೂಸ್ಟರ್ ಡೋಸ್ ಅನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡುತ್ತಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ರೂ.600 ನಿಗಧಿಪಡಿಸಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದರು.

ಆಸ್ತಿ ತೆರಿಗೆ ಪಾವತಿದಾರರು ಆನ್‌ಲೈನ್ ಮತ್ತು ಚಲನ್ ಮುಖಾಂತರ ಆಸ್ತಿ ತೆರಿಗೆ ಪಾವತಿಸಬಹುದಾಗಿದ್ದು, ದಿನಾಂಕ: 30/04/2022 ರೊಳಗೆ ಆಸ್ತಿ ತೆರಿಗೆ ಪಾವತಿಸಿದಲ್ಲಿ ಶೇ.5 ರಷ್ಟು ರಿಯಾಯಿತಿ ಸಿಗುವುದು ಆದ್ದರಿಂದ ಆಸ್ತಿ ತೆರಿಗೆ ಪಾವತಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕಂದಾಯ ಇಲಾಖೆಯ ಸಿಬ್ಬಂದಿಗಳಿಗೆ ಸೂಚಿಸಲಾಯಿತು.

ಸಭೆಯು 12–00 ಗಂಟೆಗೆ ನೋಡಲ್ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

(signature) 13.04.22
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–49 ಲಿಂಗರಾಜಪುರ

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–49 ಲಿಂಗರಾಜಪುರ

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೊಲೀಸ್ ಠಾಣೆ ಬಾಣಸವಾಡಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

Scanned with CamScanner